

◆ **ಬಂಗಾಳಿ ಸಾಹಿತ್ಯದಲ್ಲಿ ಅದ್ಭುತ ಸಾಧನೆ ಮಾಡಿರುವ ನೀವು, ಕರ್ನಾಟಕದ 'ಕುವೆಂಪು ಪ್ರತಿಷ್ಠಾನ' ನೀಡುವ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ವನ್ನು ಇತ್ತೀಚೆಗಷ್ಟೇ ಸ್ವೀಕರಿಸಿದ್ದೀರಿ. ಸಮಸ್ತ ಕನ್ನಡಿಗರ ಪರವಾಗಿ ನಿಮಗೆ ಅಭಿನಂದನೆಗಳು. ಕನ್ನಡ ಸಾಹಿತ್ಯ-ಸಂಸ್ಕೃತಿ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಬಂಗಾಳಿ ಬರವಣಿಗೆಗೆ ಸೀಮಿತವಾಗಿರುವ ನನ್ನನ್ನು, ಕುವೆಂಪು ಅವರ ಹೆಸರಿನಲ್ಲಿ ನೀಡಲಾಗುವ ಈ ಪ್ರಶಸ್ತಿಗೆ ಆಯ್ಕೆ ಮಾಡಿದ ಕನ್ನಡಿಗರ ವಿಶಾಲ ಮನಸ್ಸಿಗೆ ನಾನು ಆಭಾರಿಯಾಗಿದ್ದೇನೆ . ನನ್ನನ್ನು ಆಯ್ಕೆ ಮಾಡಿದ್ದು, ನನ್ನ ಆಯ್ದ ಕಥೆಗಳನ್ನು ಅಲ್ಪಾವಧಿಯಲ್ಲಿ ಕನ್ನಡಕ್ಕೆ ಅನುವಾದಿಸಿ 'ಸಾಮೀಪ್ಯ' ಹೆಸರಿನಲ್ಲಿ ಪ್ರಕಟಿಸಿದ್ದು, ಅಚ್ಚುಕಟ್ಟಾದ ಕಾರ್ಯಕ್ರಮವನ್ನು ಏರ್ಪಡಿಸಿ ನನ್ನನ್ನು ಗೌರವಿಸಿದ್ದು, ಎಲ್ಲಕ್ಕಿಂತ ಮುಖ್ಯವಾಗಿ ನನಗೆ ನೀಡಲಾದ ಆತಿಥ್ಯ-ಸತ್ಕಾರ ಎಲ್ಲವೂ ನನ್ನ ಮನಸ್ಸನ್ನು ಉಲ್ಲಸಿತಗೊಳಿಸಿವೆ. ಅತ್ಯಂತ ಗರಿಷ್ಠ ಸಂಖ್ಯೆಯಲ್ಲಿ 'ಜ್ಞಾನಪೀಠ'ವನ್ನು ಪಡೆದಿರುವ ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳನ್ನು ಕುರಿತಾಗಿ ವಿಶೇಷ ಅಭಿಮಾನವಿದೆ. ಸಾಹಿತ್ಯ-ಸಂಸ್ಕೃತಿಯ ವಿಷಯದಲ್ಲಿ ಬಂಗಾಳ (ಪಶ್ಚಿಮ ಬಂಗಾಳ) ಮತ್ತು ಕರ್ನಾಟಕದ